ಇಲ್ಲ

3 ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾವ ಯೋಜನೆಯನ್ನು ರೂಪಿಸಿಕೊಳ್ಳಲಾಗಿದೆ?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (454) 274
ಸದಸ್ಯರ ಹೆಸರು : ಶ್ರೀ ತಿಪ್ಪೇಸ್ವಾಮಿ
ಉತ್ತರಿಸುವವರು : (ಶ್ರೀ ಕೆ.ಜನಾರ್ಧನ ರೆಡ್ಡಿ) ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅ) ವೈಮಾನಿಕ ದಳಕ್ಕೆ ಬೇಕಾಗಿರುವ ಭೂಮಿ ಎಷ್ಟು;

ಮುಂದಿನ ಪೀಳಿಗೆಯ ರಕ್ಷಣಾ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಹಾಗೂ ಪರೀಕ್ಷಿಸಲು ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯದ ಅಧೀನ ರಕ್ಷಣಾ ಸಂಶೋಧನಾ (DRDO) ಸಂಸ್ಥೆಗೆ ಸುಮಾರು 4000 ಎಕರೆ ಭೂಪ್ರದೇಶದ ಅಗತ್ಯವಿದೆ.

ಆ) ವೈಮಾನಿಕ ದಳದ ತರಬೇತಿಯು ಇದೇ ಸ್ಥಳದಲ್ಲಿ ಸ್ಥಾಪಿಸುವ ಉದ್ದೇಶವೇನು;

ವಿಸ್ತೃತವಾದ ವೈಮಾನಿಕ ಹಾಗೂ ಭೂಸಮೀಕ್ಷೆಯನ್ನು ನಡೆಸಿದ ನಂತರ DRDO ಸಂಸ್ಥೆ ಚಿತ್ರದುರ್ಗ ಜಿಲ್ಲೆಯ ವರವು ಹಾಗೂ ಕುದಾಪುರ ಕಾವಲ್‌ನಲ್ಲಿ 2 ಸ್ಥಳಗಳನ್ನು ಹಾಲಿ ಕೋಲಾರದಲ್ಲಿನ VOD 179 ಸ್ಥಳಾಂತರಕ್ಕೆ ರಕ್ಷಣಾ ಮಂತ್ರಾಲಯ DRDO ಹಾಗೂ ನಾಗರೀಕ ವಿಮಾನಯಾನ ಮಂತ್ರಾಲಯ, ಭಾರತ ಸರ್ಕಾರವು ಗುರುತಿಸಿದೆ.

ಇ) ರೈತರ ಭೂಮಿಯನ್ನು ವಶಪಡಿಸಿಕೊಂಡ ವೈಮಾನಿಕ ದಳದ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವುದರಿಂದ ರೈತರಿಗಾಗುವ ಅನುಕೂಲತೆಗಳೇನು?

ಉದ್ದೇಶಿತ ಭೂಸ್ವಾಧೀನವು ಕೇವಲ ಸರ್ಕಾರದ ಜಮೀನನ್ನು ಒಳಗೊಂಡಿದೆ. ಆದುದರಿಂದ ರೈತರಿಗೆ ಯಾವುದೇ ನೇರವಾದ ಅನುಕೂಲ ಆಗುವುದಿಲ್ಲ, ಆದಾಗ್ಯೂ ಸ್ಥಳೀಯರಿಗೆ ಸ್ವಲ್ಪ ಮಟ್ಟಿಗೆ ಉದ್ಯೋಗವಕಾಶ ದೊರೆಯುವ ಸಾಧ್ಯತೆ ಇದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (455)275
ಮಾನ್ಯ ಸದಸ್ಯರ ಹೆಸರು : ಶ್ರೀ ತಿಪ್ಪೇಸ್ವಾಮಿ
ಉತ್ತರಿಸುವ ಸಚಿವರು : (ಶ್ರೀ.ಜಿ.ಜನಾರ್ಧನರೆಡ್ಡಿ)
: ಪ್ರವಾಸೋದ್ಯಮ ಮತ್ತು ಮೂಲಭೂತ

ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಚಿತ್ರದುರ್ಗದ ಐತಿಹಾಸಿಕ ಕೋಟೆಯಲ್ಲಿ ವಿದ್ಯುತ್ ಜೋಡಣೆ ಮತ್ತು ಪ್ರವಾಸಿಗರನ್ನು ರಂಜಿಸಲು ಸಪ್ತಸ್ವರದ ಧ್ವನಿವರ್ಧಕ ರೂಪಿಸುವಲ್ಲಿ ಸರ್ಕಾರದ ಕ್ರಮವೇನು;

ಚಿತ್ರದುರ್ಗದ ಕೋಟೆಗೆ ಹೊನಲು ಬೆಳಕಿನ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಕೋಟೆಯಲ್ಲಿ ಧ್ವನಿ ಮತ್ತು ಬೆಳಕಿನ ಯೋಜನೆಯನ್ನು ಅಳವಡಿಸುವ ಪ್ರಸ್ತಾವನೆ ಇಲಾಖೆಯ ಮುಂದಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ, ಸಪ್ತಸ್ವರದ ಧ್ವನಿವರ್ಧಕ ರೂಪಿಸುವ ಕಾರ್ಯಕ್ರಮ ಇಲಾಖೆಯ ಮುಂದಿರುವುದಿಲ್ಲ. ಚಿತ್ರದುರ್ಗದ ಕೋಟೆಯೊಳಗಿನ ಐತಿಹಾಸಿಕ ಸ್ಮಾರಕಗಳು ಹಾಗೂ ದೇವಾಲಯಗಳನ್ನು ಸಂರಕ್ಷಿಸಲು ಮತ್ತು ಪುನರುತ್ಥಾನಗೊಳಿಸಲು ರೂ.93.00ಲಕ್ಷಗಳನ್ನು ಮಹಾ ನಿರ್ದೇಶಕರು, ಕೇಂದ್ರ ಪುರಾತತ್ವ ಇಲಾಖೆ, ನವದೆಹಲಿರವರಿಗೆ ಬಿಡುಗಡೆ ಮಾಡಲಾಗಿದೆ.

ಆ) ಕೋಟೆಯಲ್ಲಿ ಪ್ರವಾಸಿಗರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಕೋಟೆಯ ಒಳಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಯೋಜನೆ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ. ಎ.ಎಸ್.ಐ ವ್ಯಾಪ್ತಿಗೆ ಬರುತ್ತದೆ. ಆದರೆ ಚಿತ್ರದುರ್ಗದ ಕೋಟೆ ಪ್ರದೇಶದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕೋಟೆಯಲ್ಲಿ ಪ್ರವಾಸಿಗರಿಗೆ ನೆರಳಿನ ವ್ಯವಸ್ಥೆಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ;

ಈ ಯೋಜನೆ ಇಲಾಕಾ ವ್ಯಾಪ್ತಿಗೆ ಬರುವುದಿಲ್ಲ.

ಈ) ಕೋಟೆಯ ಒಳಗೆ ಮತ್ತು ಸುತ್ತಲೂ ಸಾರ್ವಜನಿಕರು ನಿವೇಶನಗಳನ್ನು ನಿರ್ಮಿಸಿಕೊಂಡಿದ್ದು, ಅವರುಗಳಿಗೆ ಬೇರೆ ಕಡೆ ನಿವೇಶನಗಳನ್ನು ನೀಡಿ ತೆರವುಗೊಳಿಸುವ ಬಗ್ಗೆ ಯಾವುದಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ?

ಇಲಾಖೆಯ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: (188)276
2. ಸದಸ್ಯರ ಹೆಸರು	: ಶ್ರೀ ವಿಶ್ವನಾಥ್ ಎಸ್.ಆರ್ (ಯಲಹಂಕ)
3. ಉತ್ತರಿಸುವ ಸಚಿವರು	: (ಡಾ|| ವಿ.ಎಸ್.ಆಚಾರ್ಯ)
	: ಮಾನ್ಯ ಗೃಹ ಸಚಿವರು